# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ

**ದಿನಾಂಕ 7 ನೇ ಏಪ್ರಿಲ್ 2026**

**ಸಿ.ಸಿ. ನಂ 1688/2025**

ಫಿರ್ಯಾದಿಃ ಕರ್ನಾಟಕ ರಾಜ್ಯ (ಕುಶಾಲನಗರ ನಗರ ಪೋಲೀಸರಿಂದ)

ವಿರುದ್ಧ

ಆರೋಪಿಃ ಮನ್ಸೂರ್ ಆಲಿ

## ದೋಷಾರೋಪಣೆ

ಶ್ರೀಮತಿ ಚೈತ್ರ ಎಲ್, ಬಿ.ಬಿ.ಎಂ. ಎಲ್.ಎಲ್.ಬಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕುಶಾಲನಗರ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆಃ

ದಿನಾಂಕ 23.09.2025 ರಂದು ಬೆಳ್ಳಿಗ್ಗೆ 8.30 ಗಂಟೆಗೆ ಚಾಸಾ 2 ರವರು ಚಾಸಾ 1 ರವರಿಗೆ ಪೋನ್ ಮಾಡಿ ತಮ್ಮ ಹೋಟೆಲಿನ ಬೋರ್ಡನ್ನು ಆರೋಪಿಯಾದ ನೀವು ಗ್ಯಾರೇಜ್ ಪಕ್ಕದಲ್ಲಿ ಬಿಸಾಡಿರುತ್ತಾರೆಂದು ತಿಳಿಸಿರುತ್ತಾರೆ. ನಂತರ ಅದೇ ದಿನ ಸಮಯ 5.30 ಗಂಟೆಗೆ ಚಾಸಾ 1 ರವರು ಹೋಟೆಲಿಗೆ ಬಂದು ಆ ಬೋರ್ಡನ್ನು ಮೊದಲಿನ ಜಾಗದಲ್ಲಿ ಇಟ್ಟಿದ್ದು, ಆಗ ಅಲ್ಲಿಗೆ ಬಂದ ಆರೋಪಿಯಾದ ನೀವು ಚಾಸಾ 1 ರವರನ್ನು ಕುರಿತು ಬೋಳಿಮಗನೇ ಬೋರ್ಡ್ ತೆಗಿಯೋ ಎಂದು ಅವ್ಯಾಚ ಶಬ್ದಗಳಿಂದ ನಿಂದಿಸಿರುವ ಕಾರಣ ಆರೋಪಿಯಾದ ನೀವು ಭಾ.ನ್ಯಾ.ಸಂ.ಕಲಂ 352 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಎರಡನೇಯದಾಗಿ ಅದೇ ದಿನ, ಅದೇ ಸಮಯದಲ್ಲಿ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಮೇಲಿನ ಕೃತ್ಯವನ್ನು ಮುಂದುವರಿಸುತ್ತಾ ಚಾಸಾ 1 ರವರು ಆಗ ನಿನಗೆ ಸಮಸ್ಯೆ ಇದ್ದಲ್ಲಿ ಪಂಚಾಯಿತಿಗೆ ಕಂಪ್ಲೇಟ್ ಕೊಡು ಎಂದು ಹೇಳಿದ್ದಕ್ಕೆ ಯಾವ ಸೂಳೇ ಮಕ್ಕಳಿಗೆ ಹೋಗಿ ಬೇಕಾದರೂ ಕಂಪ್ಲೇಂಟ್ ಕೊಡು ಎಂದು ಹೇಳಿ ಕೈಯಲ್ಲಿದ್ದ ಸ್ಪೇನರ್ ನಿಂದ ಭುಜಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿರುವ ಕಾರಣ ಆರೋಪಿಯಾದ ನೀವು ಭಾ.ನ್ಯಾ.ಸಂ.ಕಲಂ 118(1) ಬಿ.ಎನ್.ಎಸ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಮೂರನೇಯದಾಗಿ ಅದೇ ದಿನ, ಅದೇ ಸಮಯದಲ್ಲಿ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಮೇಲಿನ ಕೃತ್ಯವನ್ನು ಮುಂದುವರಿಸುತ್ತಾ, ಕೈಯಿಂದ ಚಾಸಾ 1 ರವರು ಮುಖಕ್ಕೆ ಹೊಡೆದು , ಬಲ ಹೆಬ್ಬರಳಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿರುವ ಕಾರಣ ಆರೋಪಿಯಅದ ನೀವು ಭಾ.ನ್ಯಾ.ಸಂ.ಕಲಂ 115(2) ಬಿ.ಎನ್.ಎಸ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

MANSOOR.

ನಾಲ್ಕನೇಯದಾಗಿ ಅದೇ ದಿನ, ಅದೇ ಸಮಯದಲ್ಲಿ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಕೃತ್ಯವನ್ನು ಮುಂದುವರಿಸುತ್ತಾ, ಆಗ ಚಾಸಾ 2 ಮತ್ತು ಚಾಸಾ 3 ರವರುಗಳು ಜಗಳ ಬಿಡಿಸಿದ್ದು, ಆಗ ಆರೋಪಿಯಾದ ನೀವು ಇವತ್ತು ಬಚಾವಾಗಿದ್ದೀಯಾ, ನಿನ್ನ ಕೊಲ್ಲದೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿ ಸ್ಪೇನರ್ ಹಿಡಿದುಕೊಂಡು ಹೋಗಿರುವ ಆರೋಪಿಯಾದ ನೀವು ಭಾ.ನ್ಯಾ.ಸಂ.ಕಲಂ 351(2) ಬಿ.ಎನ್.ಎಸ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ..

**ಅಪಾದನೆ**

**ಪ್ರಶ್ನೆಃ 1◌ಃ ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ದೋಷಾರೋಪಣೆ ಯನ್ನು ಅರ್ಥಮಾಡಿಕೊಂಡಿರಾ?**

**ಉಃ** ಅರ್ಥವಾಯಿತು

**ಪ್ರಶ್ನೆ2◌ಃ ದೋಷಾರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?**

**ಉಃ** ಸುಳ್ಳು, ವಿಚಾರಣೆ ನಡೆಸಲಿ

( ಈ ಮೇಲ್ಕಂಡ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಲಾಗಿದ್ದು, ಆತ ಕೊಟ್ಟ ಉತ್ತರಗಳನ್ನು ನನ್ನ ಕೈ ಬರಹದಲ್ಲಿ ಬರೆದುಕೊಂಡಿದ್ದೇನೆ ಹಾಗೂ ಮೇಲ್ಕಂಡ ಹೇಳಿಕೆ ನಿಜವಾದ ಹೇಳಿಕೆ ಆಗಿರುತ್ತದೆ ಎಂದು ಈ ಮೂಲಕ ದೃಢೀಕರಿಸಿದ್ದೇನೆ)

MANKOOR.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಕುಶಾಲನಗರ